ಶ್ರೀ. ಸಿ. ಬೈರೇಗೌಡ (ಕೃಷಿ ಸಚಿವರು):

ಅ) ಜಯ, ಐಆರ್.20, ಎಂ.ಆರ್. 301 (ಪುಷ್ಪ) ತೆಲ್ಲಹಂಸ ರಾಶಿ, (ಐಇಟಿ-1444) ಫಲ್ಗುಣ, ಮಹಾವೀರ (ಐಇಟಿ-770) ಬಿಸಿಟಿ-5204 (ಸಾಂಬ ಮಸೂರಿ) ಪ್ರಕಾಶ (ಪಿಇಟಿ-2254) ಮಂಗಳ (ಎಂಆರ್. 272 ಶಕ್ತಿ (ಪಿಇಟಿ-3232) ಮಂಡ್ಯ ವಿಜಯ (ಕೆಎಂ 4-6) ಮಧು (ಎಂಆರ್-136) ಪಿಆರ್-64 ಮುಕ್ತಿ(ಸಿಟಿಹೆಚ್-1) ಹೈಬ್ರಿಡ್ ಭತ್ತ, ಕೆ.ಆರ್.ಹೆಚ್-1 ಎಡಿಟಿ-36, ಅವಿನಾಶ್-1, ಅಮೃತ್.

ಆ) ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲಾ.

ಇ) ಉದ್ಭವಿಸುವುದಿಲ್ಲಾ.

ಖಾಸಗೀ ಬಸ್ಸುಗಳ ರಾಷ್ಟ್ರೀಕರಣ ಕುರಿತು

491-ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಖಾಸಗಿ ಬಸ್ಸುಗಳನ್ನು ರಾಷ್ಟ್ರೀಕೃತಗೊಳಿಸಿದ ಬಸ್ಸುಗಳ ಸಂಖ್ಯೆ ಎಷ್ಟು ಮತ್ತು ಬಸ್ ಮಾರ್ಗಗಳನ್ನು ರಾಷ್ಟ್ರೀಕೃತಗೊಳಿಸಿದವುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿಗಳನ್ನು ಒದಗಿಸುವುದು)

ಆ) ರಾಷ್ಟ್ರೀಕೃತಗೊಳಿಸಲ್ಪಟ್ಟ ಎಲ್ಲಾ ಖಾಸಗಿ ಬಸ್‌ಗಳ ಮಾಲೀಕರುಗಳಿಗೆ ಕಾನೂನು ಪ್ರಕಾರ ಒದಗಿಸಿಕೊಡಬೇಕಾದ ಪರಿಹಾರವನ್ನು ಕೊಡಬೇಕಾದ ಹೀಗೆ ಕೊಡದೇ ಇರಲು ಕಾರಣಗಳೇನು?

ಇ) ಪರಿಹಾರ ಧನವನ್ನು ಒದಗಿಸಲು ಬಾಕಿ ಇರುವ ಬಸ್ ಮಾಲೀಕರುಗಳ ಸಂಖ್ಯೆ ಎಷ್ಟು; ಮತ್ತು ಅವರಿಗೆ ಕೊಡಬೇಕಾಗಿರುವ ಒಟ್ಟು ಮೊಬಲಗು ಎಷ್ಟು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು)

ಅ) ಇಲ್ಲ.
(ಯಾವುದೂ ಇಲ್ಲ)

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆಯ ಗ್ರಾಮ ಲೆಕ್ಕಿಗರು

530 - ಶ್ರೀ ರವಿಕಾಂತ್ ಎಸ್. ಪಾಟೀಲ್ (ಇಂಡಿ) : ಮಾ[illegible]ಯ ಸಚಿವರು ಈ ಕೆಳಕಂಡ ಪ್ರಶ್ನೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿರುವ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ ಎಷ್ಟು?

ಆ) ಖಾಲಿ ಇರುವ ಹುದ್ದೆಗಳಿಗೆ ಸರ್ಕಾರವು ಯಾವಾಗ ನೇಮಕಾತಿ ಮಾಡಿಕೊಳ್ಳುತ್ತದೆ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) 498

ಆ) ಈ ಜಿಲ್ಲೆಯಲ್ಲಿ 46 ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳನ್ನು ತುಂಬುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಬಗರ್ ಹುಕ್ಕುಂ ಜಮೀನುಗಳಿಗೆ ಸರ್ಕಾರದ ಶುಲ್ಕ

530 ಎ-ಶ್ರೀ ರವಿಕಾಂತ್ ಎಸ್. ಪಾಟೀಲ್ (ಇಂಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕ್ಕುಂನಲ್ಲಿ ಮಂಜೂರು ಮಾಡಿದ್ದಂತಹ ಜಮೀನುಗಳಿಗೆ ಸರ್ಕಾರ ವಿಧಿಸುತ್ತಿರುವ ಶುಲ್ಕವೆಷ್ಟು;

ಆ) ಈ ಶುಲ್ಕವನ್ನು ರದ್ದುಮಾಡಿ ಈ ಸರ್ಕಾರದ ಬಡ ಜನಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರದ ಕ್ರಮ ಕೈಗೊಳ್ಳುವುದೆ?

ಅ) ಈ ಹಿಂದೆ ಬಗರ್ ಹುಕುಂನಲ್ಲಿ ಮಂಜೂರು ಮಾಡಿದ ಜಮೀನುಗಳಿಗೆ ಭೂ ಕಂದಾಯದ 200 ಪಟ್ಟು ಕಿಮ್ಮತ್ತನ್ನು ವಿಧಿಸಲಾಗುತ್ತಿತ್ತು.

ಆ) ಸರ್ಕಾರವು ಸದರಿ ಕಿಮ್ಮತ್ತನ್ನು ಪುನರ್ ಪರೀಶೀಲಿಸಿ, 200 ಪಟ್ಟು ಇದ್ದ ಕಿಮ್ಮತ್ತನ್ನು ಭೂ ಕಂದಾಯದ 50 ಪಟ್ಟಿಗೆ ನಿಗಧಿಪಡಿಸಲಾಗಿದೆ. (ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ಮುಫತ್ತಾಗಿ ಮಂಜೂರು ಮಾಡಲಾಗುತ್ತಿದೆ.)

ಬೆಂಗಳೂರಿನ ಲಾಲ್‌ಬಾಗಿನಲ್ಲಿ ಸಂಗೀತ ಕಾರಂಜಿ

696-ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಲಾಲಬಾಗ್, ಉದ್ಯಾನವನಕ್ಕೆ ಪ್ರತಿ ದಿವಸ ಸಾವಿರಾರು, ಪ್ರವಾಸಿಗಳು ಭೇಟಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಪ್ರವಾಸಿಗರ ಆಕರ್ಷಣೆಗಾಗಿ ಲಾಲ್‌ಬಾಗಿನಲ್ಲಿ ಸಂಗೀತ ಕಾರಂಜಿ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ?

ಇ) ಬೆಂಗಳೂರಿನ ರಾಜಭವನದ ಬಳಿ ಸಂಗೀತ ಕಾರಂಜಿ ನಿರ್ಮಿಸಲು ರೈಲ್ವೆ ಇಲಾಖೆಯು ಕ್ರಮ ತೆಗೆದುಕೊಂಡಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ, ಲಾಲ್‌ಬಾಗ್‌ನಲ್ಲಿಯು ಸಂಗೀತ ಕಾರಂಜಿ ನಿರ್ಮಿಸಲು ರೈಲ್ವೆ ಇಲಾಖೆಯು ನೆರವನ್ನು ಕೋರಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತಿದೆಯೇ?